JULY 2023
ವಿತ್ತ ಸಂಚಿಕೆ

# INSPIRE INDIA



ಶರಣ್ ಪಾಟೀಲ್
ಆರ್ಥಿಕ ತಜ್ಞ

## ಸಲಹೆ ನಮ್ಮದು ಹೂಡಿಕೆ ನಿಮ್ಮದು

**INSPIRE INDIA WEALTH PRIVATE LTD.** @ 65, 'Surasa Enclave' 1st floor, Puttanna Road, Gandhi Bazar Basvanagudi, Bengaluru 560004, Ph: +91 8042129917, 9035414414. **Mail:** info@inspireindiafs.com **Website:** www.inspireindiafs.com



"ಸಣ್ಣ ಸಣ್ಣ ದ್ವೇಷಗಳಿಗೂ ಉತ್ತರಿಸುವಷ್ಟು ಈ ಬದುಕು ಸುದೀರ್ಘವೂ ಅಲ್ಲ ಶಾಶ್ವತವೂ ಅಲ್ಲ

–ಎಲಾನ್ ಮಸ್ಕ್



"ಐಡಿಯಾಗಳನ್ನು ಸಾಕಷ್ಟು ಜನ ಕೊಡುತ್ತಾರೆ. ಆದರೆ ಅವುಗಳನ್ನು ಎಷ್ಟು ಜನ ಜಾರಿಗೆ ತಂದಿದ್ದಾರೆ ಎನ್ನುವುದು ಮುಖ್ಯ

–ಸ್ಕಾಟ್ ಬೆಲಸ್ಕಿ



"ಒಬ್ಬ ನಾಯಕನಾಗಿ ನಿಮ್ಮ ಯಶಸ್ಸನ್ನು ನೋಡುವುದು ಮಾತ್ರ ಮುಖ್ಯವಲ್ಲ. ಇತರರ ಯಶಸ್ಸನ್ನೂ ನೋಡಬೇಕು.

–ಸುಂದರ್ ಪಿಚೈ

# ಅಪ್ಪ ನೆಟ್ಟ ದುಡ್ಡಿನ ಮರವೇ
## ನಮ್ಮ ಪಾಲಿನ ಆದರ್ಶ




"ಒಬ್ಬ ಅಪ್ಪ ನಿಸರ್ಗದತ್ತವಾಗಿ ಬ್ಯಾಂಕರ್ ಆಗಿರುತ್ತಾನೆ" ನಾವು ಚಿಕ್ಕವರಾಗಿದ್ದಾಗ ಅಪ್ಪನೇ ಎಲ್ಲ ರೀತಿಯ ದುಡ್ಡಿನ ಲೆಕ್ಕಾಚಾರ ಮಾಡುತ್ತಿದ್ದ. ಎಲ್ಲವನ್ನೂ ನಿಭಾಯಿಸುತ್ತಿದ್ದ. ನಮ್ಮ ಶಿಕ್ಷಣದ ಜವಾಬ್ದಾರಿ ವಹಿಸಿಕೊಳ್ಳುತ್ತಿದ್ದ. ಜೊತೆಗೆ ಇತರ ಅಗತ್ಯಗಳನ್ನೂ ಪೂರೈಸುತ್ತಿದ್ದ. ಅಷ್ಟೆಲ್ಲ ಸೀಮಿತ ಆದಾಯ, ಕಡಿಮೆ ಹಣಕಾಸಿನ ನಡುವೆಯೂ ಅಪ್ಪ ಇಷ್ಟೆಲ್ಲವನ್ನೂ ಹೇಗೆ ನಿಭಾಯಿಸುತ್ತಿದ್ದ ಎಂಬುದು ಅಚ್ಚರಿಯ ಸಂಗತಿಯಾಗಿತ್ತು. ನಮ್ಮ ಹಿಂದಿನ ತಲೆಮಾರಿನ ಹಣಕಾಸು ಲೆಕ್ಕಾಚಾರಗಳು ಮತ್ತು ಅವರ ನಡವಳಿಕೆಗಳು ನಿಜಕ್ಕೂ ಆದರ್ಶಪ್ರಾಯ. ಅವರು ಅನೇಕ ಅಗ್ನಿ ಪರೀಕ್ಷೆಗಳಲ್ಲಿ ಪಾರಾಗಿ ಬಂದವರು. ಎಲ್ಲವನ್ನೂ ಅತ್ಯಂತ ಪರಿಣಾಮಕಾರಿ ಹೇಗೆ ಪೂರೈಸಿದರು? ಇಷ್ಟು ಕರಾರುವಕ್ಕಾಗಿ ದುಡ್ಡಿನ ಲೆಕ್ಕ ಮಾಡುವುದನ್ನು ಯಾವ ಶಾಲೆಯಲ್ಲಿ ಕಲಿತರು? ಅವು ಈಗಲೂ ನಮ್ಮ ಪಾಲಿನ ಮಾರ್ಗದರ್ಶಿ.

1. **ನಗದು ಹರವಿನ ಡೈರಿ:** ನಮ್ಮ ಅಪ್ಪ ಯಾವತ್ತೂ ಪ್ರತಿಯೊಂದು ಆಯ ಮತ್ತು ವ್ಯಯದ ಲೆಕ್ಕವನ್ನು ಬರೆದಿಡುತ್ತಿದ್ದುದನ್ನು ನಾವೆಲ್ಲರೂ ಗಮನಿಸಿದ್ದೇವೆ. ಆದರೆ ನಾವು? ದಿನವೂ ಖರ್ಚುಗಳನ್ನು ಮಾಡುತ್ತಲೇ ಇರುತ್ತೇವೆ. ಆದರೆ ಆ ವೆಚ್ಚದ ಲೆಕ್ಕವನ್ನು ಇಡುವುದಿಲ್ಲ. ಅದರ ಪರಿಣಾಮವಾಗಿ ತಿಂಗಳ ಕೊನೆಗೆ ಕೈ ಬರಿದು ಮಾಡಿಕೊಂಡಿರುತ್ತೇವೆ. ಅದಕ್ಕಾಗಿಯೇ ನಾವು ನಗದಿನ ಹರಿವನ್ನು ಒಂದು ಪುಟ್ಟ ಪುಸ್ತಕದಲ್ಲಿ ಲೆಕ್ಕವಿಡುವುದು ಉತ್ತಮ. ಇದರಿಂದ ಅನಗತ್ಯವಾಗಿ ಖರ್ಚಾಗುವುದು ಮತ್ತು ಕೊನೆಯಲ್ಲಿ ಕೈಬರಿದಾಗುವುದು ತಪ್ಪುತ್ತದೆ. ಈಗಂತೂ ಸಾಕಷ್ಟು ಡಿಜಿಟಲ್ ಡೈರಿಗಳು ಉಚಿತವಾಗಿ ಸಿಗುತ್ತವೆ. ಅದನ್ನು ಸುಲಭವಾಗಿ ಕಾಯ್ದಿಟ್ಟುಕೊಳ್ಳಬಹುದು. ಇದರ ಜೊತೆಗೆ ದಾಖಲೆಗಳು, ಬಿಲ್‌ಗಳು, ಬ್ಯಾಂಕ್ ಸ್ಟೇಟ್‌ಮೆಂಟ್/ಪಾಸ್‌ಬುಕ್‌ಗಳು, ನಾವು ಮಾಡಿದ ಖರೀದಿಯ ಇನ್‌ವಾಯ್ಸ್ ಮತ್ತು ವಾರಂಟಿ ಕಾರ್ಡುಗಳು ಮತ್ತಿತರ ಸಂಗತಿಗಳನ್ನು ಜತನದಿಂದ ಕಾಯ್ದಿಟ್ಟುಕೊಳ್ಳುವುದು ಅತ್ಯಂತ ಹಳೆಯ ಪದ್ಧತಿ. ಇಂಥವನ್ನು ನಾವು ವರ್ಷಾನುವರ್ಷಗಳಿಂದ ಮಾಡಿಕೊಂಡು ಬಂದಿದ್ದೇವೆ. ನಾವು ಸಾಗಿ ಬಂದ ತಲೆಮಾರುಗಳು ಇದಕ್ಕೆ ಮಾದರಿಯಾಗಿವೆ. ನಮ್ಮ ಖರ್ಚು–ವೆಚ್ಚಗಳನ್ನೆಲ್ಲ ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಇದು ಅತ್ಯಂತ ಮುಖ್ಯ ವಿಧಾನವಾಗುತ್ತದೆ.

2. **ಬಜೆಟ್ ಎಂಬ ಎನ್ವಲಪ್:** ಅನೇಕರಿಗೆ ಇಂತಹುದೊಂದು ಪರಿಕಲ್ಪನೆ ಅಚ್ಚರಿಯಾಗಿ ಕಾಣಬಹುದು. ಆದರೆ ಇದು ಅನೇಕ ತಲೆಮಾರುಗಳಿಂದ ಅನುಸರಿಸಿಕೊಂಡು ಬರಲಾಗುತ್ತಿದೆ. ನಮ್ಮ ಖರ್ಚಿನ ತಿಂಗಳು ಆರಂಭವಾಗುವುದಕ್ಕೂ ಮುನ್ನ ನಮ್ಮ ಬಹಳಷ್ಟು ಭೌತಿಕ ವೆಚ್ಚಗಳ ಬಗ್ಗೆ

ಒಳ ಪುಟ ನೋಟ

ಸಾಲ ಭಾರವಾಗುವ ಮುನ್ನ... 3



ಆರೋಗ್ಯ ವಿಮೆಗೊಂದು ವಿನ್ಯಾಸ 4



ಯೋಜನೆ ರೂಪಿಸಲಾಗುತ್ತಿತ್ತು. ನಮ್ಮ ಸಾಮಾಜಿಕ ಸ್ಥಾನಮಾನಗಳನ್ನು ಕಾಯ್ದುಕೊಳ್ಳುವ ದೃಷ್ಟಿಯಿಂದ ಈ ಟ್ರೆಂಡ್‌ಗಳನ್ನು ಅನುಸರಿಸುತ್ತಿರುವ ಇತಿಹಾಸವನ್ನೇ ನಾವು ಹೊಂದಿದ್ದೇವೆ. ಆದರೆ ಇದರಿಂದ ನಾವು ಆಗಾಗ ಅತಿಯಾದ ವೆಚ್ಚವನ್ನು ಮಾಡುತ್ತೇವೆ. ಹಾಗಾಗಿ ನಮ್ಮ ಉಳಿತಾಯ ಹಾಗೂ ಹೂಡಿಕೆ ಕಡಿಮೆಯಾಗುತ್ತದೆ. ಇಂದು ಮಾಡುವ ದುಬಾರಿ ಖರೀದಿಯಿಂದ ನಾವು ನಮ್ಮ ಹಣಕಾಸಿನ ಗುರಿಗಳಲ್ಲಿ ಹಿನ್ನಡೆ ಅನುಭವಿಸಬಹುದು. ಇದಕ್ಕೆ ಪರಿಹಾರಗಳನ್ನು ಕಂಡುಕೊಳ್ಳಬೇಕು.

ಹಾಗಾಗಿ ಬಜೆಟ್ ರೂಪಿಸುವ ಕೆಲಸವನ್ನು ಕಠಿಣವಾಗಿರಬೇಕು ಮತ್ತು ಅದಕ್ಕೊಂದು ವಿಧಾನವಿರಬೇಕು. ಈ ಹಿನ್ನೆಲೆಯಲ್ಲಿ ಎನ್ವಲಪ್ ಬಜೆಟ್ ಅಥವಾ ಲಕೋಟೆಯಲ್ಲಿ ಬಜೆಟ್ ಎಂಬ ಸರಳವಾದ ಕ್ರಮವನ್ನು ನಾವು ಅನುಸರಿಸಬಹುದು. ಇದರಿಂದ ನಾವು ಹಣವನ್ನು ತಿಂಗಳ ಆರಂಭದಲ್ಲಿ ನಾನಾ ಲಕೋಟೆಗಳಲ್ಲಿ ಅಥವಾ ವಿಭಾಗಗಳಲ್ಲಿ ಇಟ್ಟು ಆಯಾ ವೆಚ್ಚಕ್ಕೆ ತಕ್ಕಂತೆ ಸಂಬಂಧಪಟ್ಟ ಲಕೋಟೆಯಿಂದ ಖರ್ಚು ಮಾಡುತ್ತ ಹೋಗಬಹುದು. ಇದರಿಂದ ತಿಂಗಳ ಕೊನೆಯಲ್ಲಿ ಕೆಲವು ಲಕೋಟೆಗಳಲ್ಲಿ ಹಣ ಉಳಿದುಬಿಡಲು ಸಾಧ್ಯವಿದೆ. ಅಂದರೆ ನೀವು ಬಜೆಟ್ ಮಾಡಿದ್ದಕ್ಕಿಂತ ಕಡಿಮೆ ಖರ್ಚು ಮಾಡಿರಬಹುದು. ಇದನ್ನು ನಿಮ್ಮ ಈಗಾಗಲೇ ಚಾಲ್ತಿಯಲ್ಲಿರುವ ಹೂಡಿಕೆಗೆ ಇನ್ನಷ್ಟು ಹಣವನ್ನು ಸೇರಿಸಲು ಅನುಕೂಲವಾಗುತ್ತದೆ.

ಇಂತಹ ಒಂದು ಅಭ್ಯಾಸಕ್ರಮವನ್ನು ಈಗಿನ ಕಾಲಕ್ಕೆ ಅಪ್ರಸ್ತುತ ಅನ್ನಿಸಬಹುದು. ಈಗಿನ ಕಾಲಕ್ಕೆ ತಕ್ಕಂತೆ ಇದನ್ನು ಡಿಜಿಟಲ್ ಎನ್ವಲಪ್‌ನಲ್ಲಿಯೂ ಇರಿಸಬಹುದು. ಅಂದರೆ ಡಿಜಿಟಲ್ ಅಕೌಂಟ್‌ಗಳು, ಬಜೆಟ್ ಆ್ಯಪ್‌ಗಳಲ್ಲಿ ಅಥವಾ ನಾನಾ ಹೆಸರಿನ ಖಾತೆಗಳಲ್ಲಿ ಅಥವಾ ವಾಲೆಟ್‌ಗಳಲ್ಲಿ ಇಟ್ಟು ನಾನಾ ಖರ್ಚುಗಳಿಗೆ ಬಳಕೆ ಮಾಡಬಹುದು.

**ಸಂಯಮದ ಅಗತ್ಯವಿರುವುದು ಕೇವಲ ಹಣಕಾಸು ನಿರ್ಧಾರಗಳಲ್ಲಿ ಮಾತ್ರವಲ್ಲ, ಹೂಡಿಕೆಯಲ್ಲಿನ ಖರೀದಿ ಮತ್ತು ಕಾಯ್ದಿರಿಸುವಿಕೆ ವಿಷಯದಲ್ಲಿಯೂ ಸಾಕಷ್ಟು ತಾಳ್ಮೆ ಬೇಕು.**

3. **"ಕಣ್ಣು–ಮನಸ್ಸು ಮೀರಿದ ದೃಷ್ಟಿ" ಕಾರ್ಯತಂತ್ರ:** ನಮ್ಮ ಬ್ಯಾಂಕ್ ಖಾತೆಯಲ್ಲಿ ನಾವು ಮಾಡಿದ ಉಳಿತಾಯ ಹಾಗೇ ಉಳಿದುಬಿಟ್ಟರೆ ಕಿರಿಕಿರಿ ಉಂಟುಮಾಡುತ್ತದೆ. ಆದಾಯ–ಖರ್ಚು= ಉಳಿತಾಯ ಎಂಬ ಸಮೀಕರಣ ಆಗಾಗ ನಮ್ಮ ಪಾಲಿಗೆ ನಿಜ. ಆದಾಯದ ಯಾವುದೇ ಬಾಕಿ ಉಳಿದುಬಿಟ್ಟರೆ ನಮಗೆ ನಾವು ಸಿರಿವಂತರು ಅನ್ನಿಸಿಬಿಡುತ್ತದೆ ಮತ್ತು ಅದನ್ನು ನಾವು ಶಾಪಿಂಗ್, ಮನರಂಜನೆ ಅಥವಾ ನಮ್ಮ ಲಿಸ್ಟ್‌ನಲ್ಲಿ ಇಲ್ಲದೇ ಇರುವ ಐಟಂಗಳನ್ನ ಕೊಳ್ಳಲು ಖರ್ಚು ಮಾಡಿಬಿಡುತ್ತೇವೆ. ಎಷ್ಟೋ ಬಾರಿ ನಮ್ಮಲ್ಲಿ ಸಾಕಷ್ಟು ಹಣವಿದೆ ಎಂಬ ತಪ್ಪು ತಿಳುವಳಿಕೆಯಿಂದ ಖರ್ಚಿನ ಬಗ್ಗೆ ಥಟ್ಟನೆ ನಿರ್ಧಾರ ಕೈಗೊಂಡುಬಿಡುತ್ತೇವೆ. ಹಾಗಾಗಿ ನಮ್ಮ ಸಮೀಕರಣವನ್ನು ಸಾಧ್ಯವಾದಷ್ಟು ಬೇಗ ಹೀಗೆ ಬದಲಿಸಿಕೊಳ್ಳುವುದು ಉತ್ತಮ; ಆದಾಯ–ಉಳಿತಾಯ= ಖರ್ಚು. ಮ್ಯುಚ್ಯುವಲ್ ಫಂಡ್ ಯೋಜನೆಗಳಲ್ಲಿ ಎಸ್‌ಐಪಿ ಮಾಡುವುದರಿಂದ ಇದು ಸಾಧ್ಯ. ಇದರಿಂದ ಎಸ್‌ಐಪಿ ಹೂಡಿಕೆ ತಿಂಗಳ ಆರಂಭದಲ್ಲಿಯೇ ನಿಮ್ಮ ಆದಾಯದಲ್ಲಿ ಕಡಿತವಾಗುತ್ತದೆ. ನಿಮ್ಮ ಆದಾಯದಲ್ಲಿನ ಪಾಲನ್ನು ಹೂಡಿಕೆಗೆ ವರ್ಗಾವಣೆ ಮಾಡುವುದರಿಂದ ಅದು ಹೆಚ್ಚು ಪ್ರಯೋಜನಕಾರಿ. ಇದರಿಂದ ಯೋಜನೆ ಇಲ್ಲದ ಮತ್ತು ತಕ್ಷಣ ಮಾಡುವ ಖರ್ಚಿನ ಮೇಲೆ ಕಡಿವಾಣ ಬೀಳುತ್ತದೆ. ಹಣವನ್ನು ನಿಮ್ಮ ಮನಸ್ಸು ಮತ್ತು ದೃಷ್ಟಿಯಿಂದ ದೂರ ಇರಿಸುವುದರಿಂದ ಹಾಗೂ ಇದನ್ನು ಕಟ್ಟುನಿಟ್ಟಿನಿಂದ ಜಾರಿಗೆ ತರುವುದರಿಂದ ನಿಮ್ಮ ಹಣಕಾಸು ಯೋಗಕ್ಷೇಮದಲ್ಲಿ ಅಚ್ಚರಿಯ ಫಲಿತಾಂಶಗಳು ಕಂಡುಕೊಳ್ಳಬಹುದು ಮತ್ತು ನಿಮ್ಮ ಹೂಡಿಕೆಗಳಲ್ಲಿಯೂ ಶಿಸ್ತು ಬರುತ್ತದೆ.
4. **ಆರೋಗ್ಯದ ರಕ್ಷಣೆಯೊಂದಿಗೆ ಸಂಪತ್ತಿನ ರಕ್ಷಣೆ:** ಇಂದಿನ ಅವಸರದ ಜಗತ್ತಿನಲ್ಲಿ ದುಡಿಮೆಯ ಒತ್ತಡ, ನಿದ್ರೆಯಲ್ಲಿ ಇಲ್ಲದ ಶಿಸ್ತು, ಹಾಸಿಗೆಯ ಮೇಲೇ ಕುಳಿತು ತಿನ್ನುವುದು, ಮದ್ಯಪಾನ ಮತ್ತು ತಂಬಾಕು ಸೇವನೆ ಸಾಮಾನ್ಯವಾಗಿ ಹೋಗಿದೆ. ವಿಲೇವಾರಿ ಮಾಡಬಹುದಾದ ಆದಾಯ ಜಾಸ್ತಿಯಾಗುತ್ತ ಹೋದ ಹಾಗೆ, ನಮ್ಮ ಬಹಳಷ್ಟು ವಾರಾಂತ್ಯಗಳು ಮದ್ಯಪಾನ ಸೇವನೆಯಂತಹ ಗೆಟ್–ಟುಗೆದರ್ ಪಾರ್ಟಿಗಳಲ್ಲಿ ಗಿರಕಿ ಹೊಡೆಯುತ್ತವೆ. ಇದು ನಮ್ಮ ಪಾಕೆಟ್ ಮೇಲೆ ಹೊಡೆತ ಬೀಳುವಂತೆ ಮಾಡುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ನಮ್ಮ ಆರೋಗ್ಯದ ಮೇಲೆ ಪರಿಣಾಮ ಉಂಟುಮಾಡುವುದು ನಿಶ್ಚಿತ. ಇದಕ್ಕೆ ತದ್ವಿರುದ್ಧವಾಗಿ ವಿಭಿನ್ನವಾದ ಸಾಮಾಜಿಕ ಜೀವನವನ್ನು ಹಿರಿಯ ತಲೆಮಾರಿನವರು ಈಗಲೂ ಅನುಭವಿಸುತ್ತಿರುತ್ತಾರೆ. ವಾಕಿಂಗ್ ವೇಳೆ ಪಾರ್ಕ್‌ಗಳಲ್ಲಿ ಭೇಟಿ, ಟೀ ಸ್ಟಾಲ್ ಕಾರ್ನರ್‌ನಲ್ಲಿ ನಾನಾ ಆರೋಗ್ಯಕರ ವಿಚಾರಗಳ ಚರ್ಚೆ, ಸಮೋಸಾ ಪಾರ್ಟಿ ಮತ್ತು ಆಗಾಗ ಹೆಚ್ಚು ಆರೋಗ್ಯಕರವಾದ ಮನೆಯಲ್ಲಿಯೇ ಮಾಡಿದ ಅಡುಗೆ ಊಟಕ್ಕಾಗಿ ಮನೆಗಳಿಗೆ ಭೇಟಿ ನೀಡುವುದು ಹೆಚ್ಚು ಅರ್ಥಪೂರ್ಣವೂ ಹೌದು, ಎಲ್ಲಕ್ಕಿಂತ ಮುಖ್ಯವಾಗಿ ಹಣ ಉಳಿತಾಯ ಮಾಡುತ್ತದೆ. ಪ್ರತಿಯೊಬ್ಬರ ಆರೋಗ್ಯಕ್ಕೆ ಸಮತೋಲಿತವಾದ



ಆಹಾರ, ಉತ್ತಮ ನಿದ್ರೆ ಮತ್ತು ನಿಯಮಿತವಾದ ವ್ಯಾಯಾಮ ಅತ್ಯಗತ್ಯ. ಆರೋಗ್ಯಕ್ಕಿಂತ ದೊಡ್ಡ ಸಂಪತ್ತು ಯಾವುದೂ ಇಲ್ಲ ಎಂದು ಪ್ರತಿಯೊಬ್ಬರೂ ಒಪ್ಪುತ್ತಾರೆ.

5. **ಸಂಯಮ ಇರಲಿ:** ಹಣಕಾಸಿನ ಹೂಡಿಕೆಗಳಲ್ಲಿ ಸಿಗುವ ಯಶಸ್ಸಿನ ಹಿಂದೆ ಮುಖ್ಯವಾಗಿ ಇರುವುದು ಸಂಯಮ. ಸರಿಯಾದ ಆಸ್ತಿ ವರ್ಗಗಳನ್ನು ಹೊಂದಿದ್ದರೆ ಅದು ನಿಮಗೆ ಸಂಯೋಜಿತ ಬಡ್ಡಿಯ ಶಕ್ತಿಯನ್ನು ನೀಡುತ್ತದೆ. ಸಂಯಮದ ಅಗತ್ಯವಿರುವುದು ಕೇವಲ ಹಣಕಾಸು ನಿರ್ಧಾರಗಳಲ್ಲಿ ಮಾತ್ರವಲ್ಲ, ನಮ್ಮ ದಿನ ನಿತ್ಯದ ದಿನಚರಿಯಲ್ಲಿಯೂ ಇರಬೇಕಾಗುತ್ತದೆ. ಹೂಡಿಕೆಯಲ್ಲಿನ ಖರೀದಿ ಮತ್ತು ಕಾಯ್ದಿರಿಸುವಿಕೆ ವಿಷಯದಲ್ಲಿಯೂ ಸಾಕಷ್ಟು ತಾಳ್ಮೆ ಬೇಕು. ಆದರೆ ಇಂತಹ ತಾಳ್ಮೆಯಿಂದ ಸಿಗುವ ಫಲ ಸಿಹಿಯಾಗಿರುತ್ತದೆ. ನೀವು ಮಾಡಿದ ಹೂಡಿಕೆಗಳು ನಿರ್ವಹಣೆಯನ್ನು ತೋರಲು ಸಾಕಷ್ಟು ಕಾಲವಕಾಶದ ಅಗತ್ಯವಿರುತ್ತದೆ. ತಾಳ್ಮೆಯಿಂದ ಇರುವುದು ಎಂದರೆ ಖಾಲಿಯಾಗಿರುವುದು ಎಂದು ಅರ್ಥವಲ್ಲ. ಇದರ ಜೊತೆಗೆ ಕೆಲವು ಮಹತ್ವದ ನಿರ್ಧಾರಗಳನ್ನು ಮುಂದೂಡಬಾರದು. ನಿಮ್ಮ ಬಂಡವಾಳ ಪಟ್ಟಿಯನ್ನು ಆಗಾಗ ಮೇಲ್ವಿಚಾರಣೆ ಮಾಡುವುದು ಮತ್ತು ಹೊಂದಾಣಿಕೆಗಳನ್ನು ಮಾಡುವುದು ಕೂಡ ಅಗತ್ಯ.

**ಬಾಟಮ್ ಲೈನ್: ಹಳೆಯ ತಲೆಮಾರಿನವರ ಈ ಐಡಿಯಾಗಳು ಆಧುನಿಕ ಹಣಕಾಸು ತಂತ್ರಜ್ಞಾನಗಳ ಜೊತೆ ಸೇರಿಕೊಂಡಾಗ ಇಂದಿನ ಹಣಕಾಸು ಜಗತ್ತಿನಲ್ಲಿ ಪ್ರತಿಯೊಬ್ಬರೂ ಬೆಳೆಯಲು ಮತ್ತು ಉಳಿಯಲು ಸಾಧ್ಯವಾಗುತ್ತದೆ. ನಮ್ಮಲ್ಲಿ ಅನೇಕರು ಹಳೆಯ ಕಾಲದ, ಸರಳವಾದ ಮತ್ತು ನಿಧಾನಗತಿಯ ಜೀವನವನ್ನು ಪರಿಶೋಧಿಸಲು ಬಯಸುತ್ತಾರೆ. ಇಂತಹ ಜೀವನದಲ್ಲಿ ಸಂಬಂಧಗಳು, ಭಾವನಾತ್ಮಕ ಸ್ಥಿರತೆ, ಉಳಿತಾಯ, ಬದುಕಿನ ಗುಣಮಟ್ಟ, ಅಗತ್ಯವಿರುವಷ್ಟೇ ಬದುಕು ಸಾಗಿಸುವುದು, ಸಂಪತ್ತು ಮತ್ತು ಅದನ್ನು ಸ್ವಾಧೀನಪಡಿಸಿಕೊಳ್ಳಲು ಇಲ್ಲದ ಪೈಪೋಟಿಗೇ ಹೆಚ್ಚಿನ ಗಮನವಿರುತ್ತದೆ. ಇತ್ತೀಚಿನ ದಿನಮಾನಗಳಲ್ಲಿ ನಾವು ಹೆಚ್ಚು ಶಿಕ್ಷಿತರಾಗಿರಬಹುದು, ಶ್ರೀಮಂತರಾಗಿರಬಹುದು. ಹಾಗಿದ್ದೂ ಬುದ್ಧಿವಂತರಾಗಿದ್ದೇವೆ ಮತ್ತು ಶ್ರೀಮಂತರಾಗಿದ್ದೇವೆ ಎಂದು ಹೇಳಲು ಬರುವುದಿಲ್ಲ.**

# ಸಾಲ ಭಾರವಾಗುವ ಮುನ್ನ...



ಬಹಳಷ್ಟು ಜನರಿಗೆ ರಾತ್ರಿ ನಿದ್ರೆ ಬಾರದೇ ಇರುವುದಕ್ಕೆ ಕಾರಣವೇನೆಂದರೆ; ಹಾಸಿಗೆ ಏರುಪೇರಾಗಿರುವುದು ಅಥವಾ ಕೆಟ್ಟ ಕನಸುಗಳು ಮತ್ತು ತಲೆಯ ಮೇಲೆ ಹೊತ್ತಿರುವ ಸಾಲದ ಹೊರೆ.

ಸಾಲವಿಲ್ಲದೇ ಬದುಕು ನಡೆಸಬೇಕು ಎಂಬುದು ಅನೇಕರ ಕನಸು. ಆದರೆ ಅದು ಯಾವತ್ತೂ ಸುಲಭದ ಮಾತಲ್ಲ. ಇತ್ತೀಚಿನ ದಿನಗಳಲ್ಲಿ ಸಾಲವೆಂಬುದು ನಮ್ಮ ಜೀವನದ ಅವಿಭಾಜ್ಯ ಅಂಗವಾಗಿ ಹೋಗಿದೆ. ಮನೆ, ಕಾರು ಅಥವಾ ಕಾಲೇಜು ಶಿಕ್ಷಣ ಸೇರಿದಂತೆ ಮಹತ್ವದ ಖರೀದಿಗಳನ್ನು ಮಾಡಲು ಅನೇಕರ ಬಳಿ ಸಾಕಷ್ಟು ಹಣವಿರುವುದಿಲ್ಲ. ಹಾಗಂತ ನಮಗೆ ಬಡ್ಡಿ ತುಂಬುವುದು ಇಷ್ಟವೆಂದೇನೂ ಅಲ್ಲ, ಆದರೆ ನಿಜವಾದ ಸಮಸ್ಯೆ ಎಂದರೆ ಭಾರೀ ಖರೀದಿ ಮಾಡಲು ನಾವು ಸಾಕಷ್ಟು ನಗದು ಉಳಿತಾಯ ಮಾಡಿರುವುದಿಲ್ಲ. ಹಾಗಾದರೆ ನಮ್ಮ ಮುಂದೆ ಇರುವ ಆಯ್ಕೆಯಾದರೂ ಏನು? ನಿಜಕ್ಕೂ ಪರಿಹಾರ ಎಂದರೆ ಸಾಲದ ಮೂಲಕ ಹಣವನ್ನು ತರುವುದು. ಹಾಗಾಗಿ ಜೀವನದಲ್ಲಿ ಒಂದಲ್ಲ ಒಂದು ಹೊತ್ತಿನಲ್ಲಿ ಸಾಲ ಮಾಡಬೇಕಾಗಿ ಬರುತ್ತದೆ.

ಎಲ್ಲರೂ ಬಣ್ಣಿಸಿದ ಹಾಗೆ ಸಾಲ ಮಾಡುವುದೇನೂ ಕೆಟ್ಟದಲ್ಲ. ಎಲ್ಲ ಸಾಲಗಳನ್ನೂ ಕೂಡ ಒಂದೇ ತಕ್ಕಡಿಯಲ್ಲಿ ತೂಗಲು ಸಾಧ್ಯವಿಲ್ಲ. ಸರಿಯಾದ ಸಾಲವನ್ನು ಆಯ್ಕೆ ಮಾಡಿಕೊಳ್ಳುವುದರಿಂದ ನಿಮ್ಮ ಹಣಕಾಸಿನ ಆರೋಗ್ಯದ ಮೇಲೆ ಧನಾತ್ಮಕ ಪರಿಣಾಮ ಉಂಟಾಗುತ್ತದೆ. ಇಂತಹ ಸಾಲಗಳನ್ನು ಸಮರ್ಪಕವಾಗಿ ನಿಭಾಯಿಸಿದರೆ ಅವು ನಿಜಕ್ಕೂ ಸಂಪತ್ತು ಕಟ್ಟುವ ದಾರಿಯಾಗುತ್ತವೆ. ಆದರೆ ಬೇಜವಾಬ್ದಾರಿಯಿಂದ ಬಳಸಿದರೆ ಗಂಭೀರವಾದ ಹಣಕಾಸು ಪರಿಣಾಮಗಳಾಗುವುದು ಮಾತ್ರ ನಿಶ್ಚಿತ.

ಬಹಳಷ್ಟು ತಜ್ಞರು ಸಾಲಗಳಲ್ಲಿ ಎರಡು ವಿಭಾಗಗಳಾಗಿ ಮಾಡುತ್ತಾರೆ. ಒಂದು ಉತ್ತಮ ಸಾಲ ಮತ್ತೊಂದು ಕೆಟ್ಟ ಸಾಲ. ಸಾಲಗಳಲ್ಲಿರುವ ನಾನಾ ವಿಧಗಳನ್ನು ಮತ್ತು ಅವು ಬೀರುವ ಪ್ರಭಾವ ಮತ್ತು ಪರಿಣಾಮಗಳನ್ನು ಇಲ್ಲಿ ಪಟ್ಟಿ ಮಾಡಲಾಗಿದೆ.

- **ಉತ್ತಮ ಸಾಲ:** ಯಾವ ಸಾಲವು ಕಾಲ ಕಳೆದಂತೆ ನಿಮ್ಮ ನಿವ್ವಳ ಆದಾಯವನ್ನು ಹೆಚ್ಚಿಸುವ ಸಾಮರ್ಥ್ಯವನ್ನು ಹೊಂದಿದೆಯೋ ಅದನ್ನು ಉತ್ತಮ ಸಾಲ ಎಂದು ಕರೆಯುತ್ತೇವೆ. ನಿಮ್ಮ ಬಜೆಟ್‌ನಲ್ಲಿ ನಿಯಮಿತವಾದ ಪಾವತಿಯನ್ನು ಮಾಡಬೇಕಾಗುತ್ತದೆ ಎಂಬುದನ್ನು ಹೊರತು ಪಡಿಸಿದರೆ ಉತ್ತಮ ಸಾಲ ಯಾವತ್ತೂ ಕೊನೆಯಲ್ಲಿ ನಿಮಗೆ ಲಾಭವನ್ನು ತರುತ್ತದೆ. ನಿಜಕ್ಕೂ ಇದೊಂದು ಹೂಡಿಕೆ ಇದ್ದಂತೆ. ಕಾಲ ಕಳೆದಂತೆ ಅದರ ಮೌಲ್ಯ ಹೆಚ್ಚಾಗುತ್ತ ಹೋಗುತ್ತದೆ. ಈ ಸಾಲಗಳು ನಿಮಗೆ ಉತ್ತಮ ಹಣಕಾಸು ಭವಿಷ್ಯವನ್ನು ಸೃಷ್ಟಿಸುತ್ತದೆ. ಇಂತಹ ಸಾಲಗಳನ್ನು ಮಾಡುವುದರಿಂದ ನಿಮ್ಮ ವ್ಯವಹಾರದ ಮೇಲೆ ಧನಾತ್ಮಕ ಪರಿಣಾಮ ಉಂಟಾಗುತ್ತದೆ ಮತ್ತು ನಿಮ್ಮ ಸ್ಥಾನಮಾನವನ್ನೂ ಹೆಚ್ಚಿಸುತ್ತದೆ. ಹಾಗಂತ ಉತ್ತಮ ಸಾಲದಲ್ಲಿಯೂ ಅಪಾಯ ಇಲ್ಲ ಎಂದೇನೂ ಅಲ್ಲ. ಇದರಲ್ಲಿರುವ ಸಾಮಾನ್ಯವಾದ ನಿಯಮ ಏನೆಂದರೆ ಯಾವತ್ತೂ ನಿಮಗೆ ನಿಭಾಯಿಸಲು ಸಾಧ್ಯವಾಗದೇ ಇರುವಷ್ಟು ಸಾಲವನ್ನು ತರಬಾರದು. ಉತ್ತಮ ಸಾಲದಲ್ಲಿನ ಕೆಲವು ಜನಪ್ರಿಯ ಉದಾಹರಣೆಗಳೆಂದರೆ;

- **ಗೃಹ ಸಾಲ:** ಉತ್ತಮ ಸಾಲಗಳ ಸಾಲಿನಲ್ಲಿ ಮುಂಚೂಣಿಯಲ್ಲಿ ನಿಲ್ಲುವಂತಹುದು ಗೃಹ ಸಾಲ. ಗೃಹ ಸಾಲವಾಗಿ ನೀವು ಮಾಡುವ ಪಾವತಿಯನ್ನು ಹೂಡಿಕೆ ಎಂದು ಪರಿಗಣಿಸಬೇಕು. ನೀವು ಒಂದು ಮನೆಯನ್ನು ಖರೀದಿ ಮಾಡಿದಾಗ ಅಥವಾ ಕಟ್ಟಿಸಿದಾಗ ಅದರಲ್ಲಿ ದಶಕಗಳ ಕಾಲ ವಾಸಮಾಡುತ್ತಿರಿ. ಇದರ ಬೆಲೆಯಲ್ಲಿ ಏರಿಕೆ ಉಂಟಾದಾಗ ಅದನ್ನು ಲಾಭಕ್ಕೆ ಮಾರಾಟ ಮಾಡಬಹುದು. ಸ್ವತಂತ್ರ ಮನೆಗಳನ್ನು ಬಾಡಿಗೆಗೆ ಕೊಡಬಹುದು ಮತ್ತು ಅದು ಆದಾಯದ ಉತ್ತಮ ಮೂಲವಾಗುತ್ತದೆ. ಒಂದು ಮನೆ ಸಾಲದಿಂದ ಮುಕ್ತವಾಗಿದ್ದಾಗ ಅದು ನಿಜಕ್ಕೂ ಸಾಮಾಜಿಕ ಗೌರವವನ್ನು ತಂದುಕೊಡುತ್ತದೆ ಮತ್ತು ಭಾವನಾತ್ಮಕವಾದ ಕಂಫರ್ಟ್‌ನ್ನು ತಂದುಕೊಡುತ್ತದೆ. ಇದೆಲ್ಲದರ ಜೊತೆಗೆ ಬಡ್ಡಿ ಮತ್ತು ಬಂಡವಾಳ ಮರುಪಾವತಿಗಳ ಮೇಲೆ ತೆರಿಗೆ ಪ್ರಯೋಜನಗಳು ಕೂಡ ಲಭ್ಯ. ಆದರೆ ಸಾಲದ ಪ್ರಮಾಣವು ಯಾವತ್ತೂ ನಿಮ್ಮ ಆದಾಯವನ್ನು ಅವಲಂಬಿಸಿಕೊಂಡಿರಬೇಕು. ಇಲ್ಲಿ ಸಾಲದ ಸುಲಭ ಕಂತುಗಳನ್ನು ಪಾವತಿ ಮಾಡುವುದು ಹೊರೆಯಾಗಿ ಪರಿಣಮಿಸಬಾರದು.

- **ವಿದ್ಯಾರ್ಥಿ ಸಾಲ:** ವಿದ್ಯಾರ್ಥಿ ಸಾಲವು ನಿಮಗೆ ಶಿಕ್ಷಣವನ್ನು ನೀಡುತ್ತದೆ ಮತ್ತು ನಿಮ್ಮ ಸುದೀರ್ಘಾವಧಿ ಕಲಿಕೆಯ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಶಿಕ್ಷಣವು ನಿಮ್ಮ ಭವಿಷ್ಯದ ಉದ್ಯೋಗದ ಅವಕಾಶಗಳು ಮತ್ತು ಗಳಿಕೆ ಸಾಮರ್ಥ್ಯದ ಮೇಲೆ ಪರಿಣಾಮವನ್ನು ಬೀರುತ್ತದೆ. ಉನ್ನತ ಶಿಕ್ಷಣವನ್ನು ಪಡೆದವರಿಗೆ ಉನ್ನತ ದರ್ಜೆಯ ಕಂಪನಿಗಳಲ್ಲಿ ಉತ್ತಮ ವೇತನವನ್ನು ಒಳಗೊಂಡ ಉದ್ಯೋಗ ದೊರೆಯುವುದು ನಿಶ್ಚಿತ. ಜೊತೆಗೆ ಭವಿಷ್ಯದಲ್ಲಿ ಅಗತ್ಯವೆನಿಸಿದಾಗ ಹೊಸ ಹಾಗೂ ಉತ್ತಮ ಉದ್ಯೋಗಗಳನ್ನು ಕೂಡ ಪಡೆದುಕೊಳ್ಳಬಹುದು. ಇದು ಒಂದು ಕಾಲೇಜು ಅಥವಾ ತಾಂತ್ರಿಕ ಪದವಿಯಲ್ಲಿ ಮಾಡುವ ಒಂದು ಹೂಡಿಕೆ. ಪದವಿ ಪಡೆದು ಉದ್ಯೋಗಕ್ಕೆ ಸೇರಿದ ಕೆಲವೇ ವರ್ಷಗಳಲ್ಲಿ ಹಾಗೆ ಮಾಡಿದ ಸಾಲವನ್ನು ಪಾವತಿ ಮಾಡಿಬಿಡಬಹುದು. ಹಾಗಂತ ಎಲ್ಲ ಪದವಿಗಳನ್ನೂ ಒಂದೇ ಮೌಲ್ಯದಿಂದ ಅಳೆಯಲು ಸಾಧ್ಯವಿಲ್ಲ. ನೀವು ಅಧ್ಯಯನ ಮಾಡುವ ಯಾವುದೇ ಕ್ಷೇತ್ರದಲ್ಲಿ ಅಲ್ಪಾವಧಿ ಮತ್ತು ದೀರ್ಘಾವಧಿ ಅವಕಾಶಗಳನ್ನು ಪರಿಗಣಿಸುವುದು ಉತ್ತಮ.

**ಉತ್ತಮ ಸಾಲದಲ್ಲಿರುವ ಅಪಾಯಗಳು:** ಯಾವುದೇ ಆದರೂ ಕೂಡ

**ತಾರ್ಕಿಕವಾಗಿ ಯೋಚನೆ ಮಾಡುವುದಾದರೆ ಈ ಸಂದರ್ಭದಲ್ಲಿ ಕೆಲವು ತಪ್ಪುಗಳನ್ನು ಮಾಡುವುದನ್ನು ತಪ್ಪಿಸಬೇಕು. ಸಾಲ ಮಾಡುವುದು ಉತ್ತಮ ಯೋಚನೆಯೇ, ಅದರಿಂದ ನಿಮಗೆ ಹೊರೆಯಾಗುವುದೇ ಎಂಬ ಚಿಂತನೆ ನಡೆಸುವುದು ಸಮರ್ಥನೀಯ.**

ಅತಿಯಾದರೆ ಅಪಾಯಕಾರಿ. ಅದು ಸಾಲದ ವಿಚಾರದಲ್ಲಿಯೂ ಅಷ್ಟೇ. ನಾವು ಒಂದು ಉತ್ತಮ ಸಾಲವನ್ನು ತೆಗೆದುಕೊಳ್ಳುವ ಸಂದರ್ಭದಲ್ಲಿ ಸಾಮಾನ್ಯವಾಗಿ ನಮ್ಮದೇ ಗುರಿಗಳನ್ನು ಆಧರಿಸಿದ ಭವಿಷ್ಯದ ಬಗ್ಗೆ ಊಹೆಗಳನ್ನು ಮಾಡಿರುತ್ತೇವೆ ಮತ್ತು ಹಿಂದಿನ ಫಲಿತಾಂಶದ ಬಗ್ಗೆಯೂ ಲೆಕ್ಕಾಚಾರ ಹಾಕಿರುತ್ತೇವೆ. ಆದರೆ ಮುಂದಿನ ದಿನಗಳ ಬಗ್ಗೆ ಯಾವುದೇ ಗ್ಯಾರೆಂಟಿ ಇರುವುದಿಲ್ಲ. ನಿಮ್ಮ ಕೈಗೆ ಎಟುಕದೇ ಇರುವಷ್ಟು ಸಾಲವನ್ನು ಪಡೆದುಕೊಂಡರೆ ಭವಿಷ್ಯಕ್ಕಾಗಿ ಏನನ್ನೂ ಉಳಿತಾಯ ಮಾಡಲು ಸಾಧ್ಯವಾಗುವುದಿಲ್ಲ ಮತ್ತು ಸಾಲದ ಮರುಪಾವತಿಯ ಒತ್ತಡ ಹೆಚ್ಚಾಗುತ್ತದೆ. ಯಾವುದೇ ಸಾಲವನ್ನು ಪಡೆಯುವುದಕ್ಕೂ ಮುನ್ನ ಅದರಿಂದ ಯಾವ ಪ್ರಯೋಜನ/ಆದಾಯ ನಿರೀಕ್ಷಿಸುತ್ತೀರಿ, ಎಲ್ಲಿ ತಪ್ಪಾಗಬಹುದು ಎಂಬ ಬಗ್ಗೆಯೂ ಎಚ್ಚರಿಕೆಯಿಂದ ಪರಿಗಣಿಸಬೇಕಾದ ಅಗತ್ಯವಿರುತ್ತದೆ.

- **ಕೆಟ್ಟ ಸಾಲಗಳು:** ಯಾವ ಆಸ್ತಿ ಕೊಂಡ ಬಳಿಕ ಸವಕಳಿ ಹೊಂದುವುದೋ ಅಥವಾ ಅದರ ಮೌಲ್ಯ ಕುಸಿತವಾಗುವುದೋ ಅದಕ್ಕಾಗಿ ಸಾಲ ಮಾಡುವುದು ಕೆಟ್ಟ ಸಾಲವಾಗಿ ಪರಿಣಮಿಸುತ್ತದೆ. ತಿಂಗಳುಗಳು ಅಥವಾ ವರ್ಷಗಳ ಪಾವತಿಯ ಬಳಿಕವೂ ನಿಮಗೆ ಯಾವುದೇ ಮೌಲ್ಯ ಉಳಿಯದೇ ಇರಬಹುದು. ಈ ಸಾಲಗಳು ಸಾಮಾನ್ಯವಾಗಿ ಅತ್ಯಧಿಕವಾದ ಬಡ್ಡಿ ದರಗಳನ್ನು ಹೊಂದಿರುತ್ತವೆ. ಇದು ನಿಮ್ಮ ಪಾಕೆಟ್‌ಗೆ ದೊಡ್ಡ ಹೊರೆಯಾಗಿ ಪರಿಣಮಿಸಬಹುದು. ಕೆಲವೊಂದು ಭಾರೀ ಹಣಕಾಸು ತಡೆಗೋಡೆಯಾಗುವ ಸಾಧ್ಯತೆ ಇರುತ್ತದೆ. ಹಾಗಂತ ಮಾಡುವ ಎಲ್ಲ ಬಳಕೆ ಸಂಬಂಧಿ ಖರ್ಚುಗಳು ಕೆಟ್ಟದು ಎಂದೇನೂ ಅಲ್ಲ. ಆದಾಯವು ತೃಪ್ತಿಕರವಾಗಿದ್ದರೆ ಜೀವನಶೈಲಿಯು ಸಮರ್ಥನೀಯವೇ ಆಗಿರುತ್ತದೆ. ಆರಾಮದಾಯಕ ಜೀವನ ಮತ್ತು ದೊಡ್ಡ ದೊಡ್ಡ ಕನಸುಗಳನ್ನು ಸಾಕಾರಗೊಳಿಸಲು ಸಾಧ್ಯವಿದೆ. ನಿಜವಾದ ಪ್ರಶ್ನೆ ಇರುವುದು ಕೈಗೆಟುಕಬಲ್ಲುದೇ ಎಂಬುದು. ಉಳಿತಾಯಕ್ಕೆ ಯಾವುದೇ ಕೊರತೆ ಉಂಟಾಗದಂತೆ ಪೂರ್ತಿ ವೆಚ್ಚಗಳನ್ನು ಭರಿಸುವ ಸಾಮರ್ಥ್ಯವಿದ್ದರೆ ಅಂತವನ್ನು ಕೆಟ್ಟ ಸಾಲಗಳೆಂದು ಪರಿಗಣಿಸುವ ಅಗತ್ಯವೇನೂ ಇರುವುದಿಲ್ಲ. ಆದರೆ ಗಳಿಕೆಗೂ ಮೊದಲೇ ಖರ್ಚು ಮಾಡಲು ಸಾಲ ಪಡೆದರೆ ಅಥವಾ ಭವಿಷ್ಯದ ಸಂಭಾವ್ಯ ಗಳಿಕೆಯ ಆಧಾರದಲ್ಲಿ ಸಾಲವನ್ನು ಪಡೆದರೆ ಅದು ಕೆಟ್ಟ ಸಾಲವಾಗುತ್ತದೆ. ಇಂತಹ ಕೆಲವು ಕೆಟ್ಟ ಸಾಲಗಳ ಉದಾಹರಣೆಗಳು ಇಲ್ಲಿವೆ:

- **ಆಟೊಮೊಬೈಲ್ ಸಾಲ:** ಆಟೊಮೊಮ್ಯೈಲ್ ಅನೇಕರಿಗೆ ಅಗತ್ಯಗಳಲ್ಲಿ ಒಂದಾಗಿದೆ. ಆದರೆ ನಮ್ಮಲ್ಲಿ ಅನೇಕರಿಗೆ ಕಾರುಗಳ ಖರೀದಿ ಎನ್ನುವುದು ಬಜೆಟ್‌ನ್ನು ಮೀರಿದ ಸಂಗತಿಯಾಗಿದೆ. ಸ್ಥಾನಮಾನಗಳನ್ನು ಹೆಚ್ಚಿಸಿಕೊಳ್ಳುವ ಉದ್ದೇಶದಿಂದ ಸಾಲ ತೆಗೆದುಕೊಳ್ಳುವ ಆಸೆಗೆ ಬಿದ್ದುಬಿಡುತ್ತೇವೆ. ನಾವು ಬ್ರಾಂಡ್ ಹೊಸ ಕಾರನ್ನು ಖರೀದಿ ಮಾಡಿ ಶೋರೂಂನಿಂದ ಮನೆಗೆ ತೆಗೆದುಕೊಂಡು ಬರುವ ಹೊತ್ತಿಗೆ ಅದರ ಮೌಲ್ಯ ಕುಸಿದಿರುತ್ತದೆ. ಕಾರಿನ ಮೌಲ್ಯ ಕುಸಿತ ಯಾವತ್ತೂ ಅಧಿಕವಾಗಿರುತ್ತದೆ. ಕಾರಿನ ಸಾಲದ ಮೇಲಿನ ಬಡ್ಡಿ ಸಾಮಾನ್ಯವಾಗಿ ಅಧಿಕವಾಗಿರುವ ಕಾರಣ ಅದಕ್ಕೆ ಮಾಡಿರುವ ದೊಡ್ಡ ಮೊತ್ತದ ಸಾಲ ನಿಮ್ಮ ಜೇಬಿಗೆ ಕತ್ತರಿ ಬೀಳುವುದು ನಿಶ್ಚಿತ. ಇನ್ನೂ ಕೆಟ್ಟ ಸ್ಥಿತಿ ಏನೆಂದರೆ ಕೆಲವೇ ತಿಂಗಳುಗಳಲ್ಲಿ ಹೊಚ್ಚಹೊಸ ಮಾದರಿಯ ಕಾರುಗಳು ಮಾರುಕಟ್ಟೆಗೆ ಬಂದಿರುತ್ತವೆ.

- **ಬಳಕೆಗಾಗಿ ಪರ್ಸನಲ್ ಸಾಲ:** ನಿಮ್ಮ ಬೆರಳ ತುದಿಯಲ್ಲಿಯೇ ಸುಲಭವಾಗಿ ಸಾಲ ಸಿಗುವಾಗ ಎಲ್ಲ ಗ್ಯಾಜೆಟ್‌ಗಳು, ಮೊಬೈಲ್ ಫೋನ್‌ಗಳು, ಆನ್‌ಲೈನ್ ಶಾಪಿಂಗ್ ಮಾಡುವುದು ಹಾಗೂ ರಜಾ ದಿನಗಳನ್ನು ಕಳೆಯುವುದು ಕಷ್ಟವೇನೂ ಅಲ್ಲ. ನಾವು ಮಾಡುವ ಖರ್ಚಿನಲ್ಲಿ ಸಾಲವು ಅವಿಭಾಜ್ಯ ಅಂಗವಾಗಿದೆ. ಬಹುತೇಕ ನಮ್ಮ ಖಯಾಲಿಗಳಿಗಾಗಿ ಮಾಡುವ ಇಂತಹ ಖರೀದಿಗಳನ್ನು ಸುಲಭವಾಗಿ ತಪ್ಪಿಸಲು ಸಾಧ್ಯವಿದೆ. ಕೇವಲ ಸಾಲ ಸಿಗುತ್ತದೆ ಎಂಬ ಕಾರಣಕ್ಕೆ ಖರೀದಿಯನ್ನು ಮಾಡುವುದು ಸಮರ್ಥನೀಯವಲ್ಲ. ಕಾಲಕ್ರಮೇಣ ಇಂತಹ ಜೀವನಕ್ರಮಗಳು ನಿಮ್ಮ ಸಂಭಾವ್ಯ ಉಳಿತಾಯವನ್ನು ತಿಂದುಹಾಕಲಿದೆ. ನಿಮ್ಮ ಸಂಪತ್ತು ಸೃಷ್ಟಿಯ ಜರ್ನಿಯಲ್ಲಿ ತೊಡಕಾಗುವುದು ಖಚಿತ. ಅದರಲ್ಲಿಯೂ ಕ್ರೆಡಿಟ್ ಕಾರ್ಡ್ ಮೇಲೆ ಖರೀದಿ ಮಾಡಿ ಅಂತಹ ಸಾಲ ಬೆಳೆಸುವುದು ಅತ್ಯಂತ ಕೆಟ್ಟ ಸ್ಥಿತಿ.

**ಬಾಟಮ್ ಲೈನ್: ಯಾವುದೇ ಸಾಲವನ್ನು ಪಡೆದುಕೊಳ್ಳುವುದಕ್ಕೆ ಮುನ್ನ ಕೆಲವು ಪ್ರಶ್ನೆಗಳನ್ನು ನಿಮಗೆ ನೀವು ಕೇಳಿಕೊಳ್ಳಬೇಕು. ಮಾಲೀಕತ್ವದ ಒಟ್ಟು ವೆಚ್ಚ ಎಷ್ಟು, ಅಗತ್ಯವಿರುವ ಮುಂಚಿತ ಪಾವತಿ, ಒಟ್ಟಾರೆ ಸಾಲದ ಅವಧಿಯಲ್ಲಿ ಬೀಳುವ ಬಡ್ಡಿಯ ವೆಚ್ಚ ಎಷ್ಟು, ಸಾಲದಿಂದ ಆಗುವ ಲಾಭ ಅಥವಾ ಫಲಿತಾಂಶ ಏನು ಎನ್ನುವಂತಹ ಪ್ರಶ್ನೆಗಳನ್ನು ಕೇಳಿಕೊಳ್ಳುವುದು ಉತ್ತಮ. ಇಂತಹುದೊಂದು ಸಾಲದ ಆಯ್ಕೆ ಮಾಡಿಕೊಳ್ಳುವುದರಿಂದ ನಿಮ್ಮ ಮುಂದೆ ಇರಬಹುದಾದ ಉಳಿದ ಆಯ್ಕೆ ಯಾವುದು ಎಂಬುದರ ಪರಿಶೋಧನೆಯನ್ನೂ ಮಾಡಬೇಕು. ತಾರ್ಕಿಕವಾಗಿ ಯೋಚನೆ ಮಾಡುವುದಾದರೆ ಈ ಸಂದರ್ಭದಲ್ಲಿ ಕೆಲವು ತಪ್ಪುಗಳನ್ನು ಮಾಡುವುದನ್ನು ತಪ್ಪಿಸಬೇಕು. ಸಾಲ ಮಾಡುವುದು ಉತ್ತಮ ಯೋಚನೆಯೇ, ಅದರಿಂದ ನಿಮಗೆ ಹೊರೆಯಾಗುವುದೇ ಎಂಬ ಚಿಂತನೆ ನಡೆಸುವುದು ಸಮರ್ಥನೀಯ.**



# ಆರೋಗ್ಯ ವಿಮೆಗೊಂದು ವಿನ್ಯಾಸ

ಇಂದಿನ ಜಗತ್ತಿನಲ್ಲಿ ಬಹುತೇಕ ಮಂದಿ ಅನಾರೋಗ್ಯಕರ ಆಹಾರ ಕ್ರಮಗಳೊಂದಿಗೆ ಚಟುವಟಿಕೆ ರಹಿತವಾದ ಜೀವನಕ್ರಮಗಳನ್ನು ಅನುಸರಿಸುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ಒತ್ತಡ ಹಾಗೂ ಬಿಡುವಿಲ್ಲದ ಕೆಲಸಗಳಿಂದಾಗಿ ಜನ ಬಹುಬೇಗ ರೋಗಗಳಿಗೆ ಒಳಗಾಗುತ್ತಿದ್ದಾರೆ. ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯೂಎಚ್‌ಒ) ಪ್ರಕಾರ ಭಾರತವು ಐದು ಕೋಟಿಗೂ ಅಧಿಕ ಮಂದಿ ಮಧುಮೇಹಿಗಳನ್ನು ಹೊಂದಿದೆ ಮತ್ತು ಇದು ಜಗತ್ತಿನಲ್ಲಿಯೇ ಅಧಿಕ. ಎರಡೂವರೆ ಕೋಟಿಗೂ ಹೆಚ್ಚಿನ ಜನ ಹೃದಯ ಸಂಬಂಧಿ ಕಾಯಿಲೆಗಳಿಂದ ಬಳಲುತ್ತಿದ್ದು ಇದು ಜಗತ್ತಿನಲ್ಲಿಯೇ ಶೇ.60ರಷ್ಟು ಪ್ರಕರಣಗಳನ್ನು ಹೊಂದಿದಂತಾಗಿದೆ. ಆದರೆ ಈಗಿನ ಕಾಲಘಟ್ಟಕ್ಕೆ ಮತ್ತು ಹಣದುಬ್ಬರದ ಪರಿಸ್ಥಿತಿಗೆ ತಕ್ಕಂತೆ ಈ ರೋಗಗಳಿಗೆ ಚಿಕಿತ್ಸೆ ನೀಡುವ ವೆಚ್ಚ ಕೂಡ ಗಣನೀಯವಾಗಿ ಹೆಚ್ಚಿದೆ.

ಜನರು ಇದ್ದಕ್ಕಿಂತ ಬಡತನಕ್ಕೆ ಮರಳುತ್ತಿರುವುದರ ಹಿಂದಿನ ಬಹುಮುಖ್ಯ ಕಾರಣ ವೈದ್ಯಕೀಯ ಚಿಕಿತ್ಸಾ ವೆಚ್ಚ. ರಾಷ್ಟ್ರೀಯ ಆರೋಗ್ಯ ಲೆಕ್ಕಾಚಾರಗಳ ಪ್ರಕಾರ 2018–19ರ ಅವಧಿಯಲ್ಲಿ ಆರೋಗ್ಯ ಸೌಲಭ್ಯಕ್ಕಾಗಿ ಭಾರತೀಯರ ಪಾಕೆಟ್‌ನಿಂದ ಆಗುತ್ತಿರುವ ಸರಾಸರಿ ವೆಚ್ಚ ಶೇ.48.21ರಷ್ಟು. ವಿಶ್ವ ಆರೋಗ್ಯ ಸಂಸ್ಥೆ ಪ್ರಕಾರ 2019ರಲ್ಲಿನ ಜಾಗತಿಕ ಸರಾಸರಿಯಾದ ಶೇ.18.1ಕ್ಕೆ ಹೋಲಿಸಿದರೆ ತೀರಾ ಅಧಿಕ ಪ್ರಮಾಣ ಎಂದು ಭಾವಿಸಲಾಗಿದೆ. 2022ರಲ್ಲಿ ಈ

ಪ್ರಮಾಣವು ಇನ್ನಷ್ಟು ದಯನೀಯವಾಗಿತ್ತು. ವಾರ್ಷಿಕವಾಗಿ 5.5 ಕೋಟಿ ಭಾರತೀಯರು ಅಧಿಕ ಪ್ರಮಾಣದಲ್ಲಿ ಆರೋಗ್ಯ ವೆಚ್ಚವನ್ನು ಭರಿಸುತ್ತಿದ್ದಾರೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಅಂದಾಜು ಮಾಡಿದೆ.

ಇಂತಹ ಸವಾಲುಗಳನ್ನು ಎದುರಿಸಲು ಇರುವ ಒಂದೇ ಒಂದು ಪರಿಹಾರವೆಂದರೆ ಸೂಕ್ತವಾದ ಆರೋಗ್ಯ ವಿಮೆಯನ್ನು ಹೊಂದುವುದು. ಆದರೆ ನಾವು ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹೋಗಿ ಸಂಪೂರ್ಣವಾದ ಆರೋಗ್ಯ ವಿಮೆಯನ್ನು ಮಾಡಿಸಿಕೊಳ್ಳುವುದು ಉತ್ತಮ.

### ಹಾಗಾದರೆ ಯಾಕೆ ನೀವು ಆರೋಗ್ಯ ವಿಮಾ ಪಾಲಿಸಿಯನ್ನು ಹೊಂದಿರಬೇಕು?

ಆರೋಗ್ಯ ವಿಮಾ ಪೋರ್ಟ್‌ಫೋಲಿಯೋ ಎಂದರೆ ನಾನಾ ರೀತಿಯ ಪ್ಲಾನ್‌ಗಳನ್ನು ಹೊಂದಿರುವ ವಿಮೆಗಳ ಗುಚ್ಛ. ನಿಮ್ಮ ಕೈಗೆಟಕುವ ವೆಚ್ಚದಲ್ಲಿ ಗರಿಷ್ಠ ಪ್ರಮಾಣದ ಪ್ರಯೋಜನಗಳು ಹಾಗೂ ವೈದ್ಯಕೀಯ ಸವಲತ್ತುಗಳನ್ನು ಪಡೆಯುವುದು ಇದರಿಂದ ಸಾಧ್ಯವಾಗುತ್ತದೆ. ಯಾವುದೇ ಸಂದರ್ಭದಲ್ಲಿ ವೈದ್ಯಕೀಯ ತುರ್ತು ಸ್ಥಿತಿ ಉಂಟಾದರೆ ನಿಮ್ಮಲ್ಲಿರುವ ಆರೋಗ್ಯ ವಿಮಾ ಯೋಜನೆಗಳ ಪೋರ್ಟ್‌ಫೋಲಿಯೋದಿಂದ ಅಗತ್ಯ ಸೌಲಭ್ಯಗಳನ್ನು ಪಡೆದುಕೊಳ್ಳಬಹುದು. ಇದರಿಂದಾಗಿ ನೀವು ಖರ್ಚಿನ ಬಗ್ಗೆ ಯಾವುದೇ ಚಿಂತೆ ಇಲ್ಲದೆ ಆರಾಮವಾಗಿ ಇದ್ದುಬಿಡಬಹುದು. ಇದರಲ್ಲಿರುವ ಆರೋಗ್ಯ ವಿಮಾ ಕವರೇಜ್‌ಗಳೆಂದರೆ ನಗದು ರಹಿತ ಚಿಕಿತ್ಸೆ, ಆಸ್ಪತ್ರೆಗೆ ದಾಖಲಾಗುವ ಮುನ್ನ ಮತ್ತು ಬಳಿಕದ ವೆಚ್ಚಗಳು, ಕ್ಲೈಮ್ ರಹಿತ ಬೋನಸ್ ಇತ್ಯಾದಿಗಳ ಜೊತೆಗೆ ತೆರಿಗೆ ಪ್ರಯೋಜನಗಳು ಸೇರಿವೆ.

ನಮ್ಮ ಅಗತ್ಯಗಳು ಮತ್ತು ಬಯಕೆಗೆ ಅನುಗುಣವಾಗಿ ನಾನಾ ರೀತಿಯ ಆರೋಗ್ಯ ವಿಮಾ ಪಾಲಿಸಿಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ಆರೋಗ್ಯ ವಿಮಾ ಯೋಜನೆಗಳಲ್ಲಿ ಮೂರು ಮೂರು ಮುಖ್ಯ ವಿಧಗಳು:

1. **ಬೇಸ್ ಪ್ಲಾನ್:** ಇದು ನಿಮ್ಮ ಸ್ಟಾಂಡರ್ಡ್, ಸ್ಟಾಂಡಲೋನ್ ಆರೋಗ್ಯ ವಿಮಾ ಪಾಲಿಸಿ. ಇದು ನಿರ್ದಿಷ್ಟ ವಿಮಾ ಮೊಬಲಗಿನ ವರೆಗಿನ ವೈದ್ಯಕೀಯ ವೆಚ್ಚಗಳನ್ನು ಭರಿಸುತ್ತದೆ. ವಿಮೆಯನ್ನು ಒದಗಿಸುವವರಿಗೆ ಅನುಗುಣವಾಗಿ ವಿಮೆಯ ಸೌಲಭ್ಯಗಳು ಹಾಗೂ ಪ್ರಯೋಜನಗಳು ಇರುತ್ತವೆ. ಬೇಸ್ ವಿಮಾ ಪಾಲಿಸಿಯನ್ನು ಪರಿಗಣಿಸುವ ಸಂದರ್ಭದಲ್ಲಿ ಕೆಲವು ಸಾಮಾನ್ಯ ಅಂಶಗಳು ಹಾಗೂ ಪ್ರಯೋಜನಗಳನ್ನು ಗಮನಿಸುವುದು ಸೂಕ್ತ; ಆಸ್ಪತ್ರೆಗೆ ದಾಖಲಾಗುವುದಕ್ಕೂ ಮೊದಲು ಮತ್ತು ನಂತರದ ವೆಚ್ಚಗಳು ಮತ್ತು ನಿಯಮಿತವಾದ ಪ್ರಿಮಿಯಂ.
2. **ಟಾಪ್-ಅಪ್ ಪ್ಲಾನ್:** ಮೂಲ ಮೊತ್ತವನ್ನು ಮೀರಿದ ಕ್ಲೈಮ್‌ಗೆ ಹೆಚ್ಚುವರಿ ಸೌಲಭ್ಯವನ್ನು ಪಡೆದುಕೊಳ್ಳಲು ಟಾಪ್-ಅಪ್ ಪ್ಲಾನ್‌ನಿಂದ ಅವಕಾಶವಿರುತ್ತದೆ. ಬೇಸ್ ಆರೋಗ್ಯ ವಿಮಾ ಯೋಜನೆಯ ಅಡಿಯಲ್ಲಿ ವಿಮಾದಾರರು ನಿರ್ದಿಷ್ಟ ಮೊತ್ತಕ್ಕೆ ಮಾತ್ರ ಸೌಲಭ್ಯವನ್ನು ನೀಡುತ್ತಾರೆ. ಆದರೆ ಈ ಮಿತಿಯನ್ನು ಮೀರಿದಾಗ ಟಾಪ್-ಅಪ್ ಪಾಲಿಸಿ ಅನ್ವಯವಾಗುತ್ತದೆ. ಟಾಪ್-ಅಪ್ ಯೋಜನೆಯು ಸಾಮಾನ್ಯವಾಗಿ ಒಂದು ಬಾರಿಯ ಆಸ್ಪತ್ರೆಯ ವೆಚ್ಚಗಳನ್ನು ಭರಿಸುತ್ತದೆ ಮತ್ತು ಕ್ಲೈಮ್ ಮಾಡಿದ ವೆಚ್ಚಗಳು ಮೂಲ ಮಿತಿಯನ್ನು ಮೀರಿದಾಗ ಇದು ಅನ್ವಯವಾಗುತ್ತದೆ. ಮೂಲ ಮಿತಿಯನ್ನು ಮೀರಿದಾಗ ಟಾಪ್-ಅಪ್‌ನಲ್ಲಿ ಯಾವ ಮೊತ್ತಕ್ಕೆ ವಿಮೆಯನ್ನು ಮಾಡಲಾಗಿದೆಯೋ ಅದಕ್ಕೆ ಕ್ಲೈಮ್ ಮಾಡಿಕೊಳ್ಳಬಹುದು. ಉದಾಹರಣೆಗೆ ಐದು ಲಕ್ಷ ರೂ ವಿಮಾ ಸೌಲಭ್ಯದ ಟಾಪ್-ಅಪ್ ಪ್ಲಾನ್‌ನಲ್ಲಿ 2ಲಕ್ಷವು ಕಡಿತಗೊಳಿಸಬಹುದಾದ ಮೊತ್ತವಾಗಿದ್ದರೆ ಆಗ ಒಮ್ಮೆ ಕ್ಲೈಮ್ ಮಾಡುವ ಮೊತ್ತವು 2ಲಕ್ಷವನ್ನು ಮೀರಿದರೆ ಆಗ ಟಾಪ್-ಅಪ್ ಪಡೆದುಕೊಳ್ಳಲು ಅವಕಾಶವಿರುತ್ತದೆ.

ಈಗಾಗಲೇ ಗಮನಿಸಿದಂತೆ ಪ್ರಾಥಮಿಕ/ಮೂಲ ಆರೋಗ್ಯ ವಿಮೆಗೆ ಟಾಪ್-ಅಪ್ ಆರೋಗ್ಯ ವಿಮೆಯು ಪೂರಕವಾಗಿರುತ್ತದೆ. ಒಂದು ವೇಳೆ ನಿಮ್ಮ ಈಗಿನ ಆರೋಗ್ಯ ವಿಮಾ ಪಾಲಿಸಿಯ ಗರಿಷ್ಠ ಮೊಬಲಗನ್ನು ತಲುಪಿದರೆ ಟಾಪ್-ಅಪ್ ಪ್ಲಾನ್ ನಿಮ್ಮ ಅಪೇಕ್ಷಿತ ವೈದ್ಯಕೀಯ ವೆಚ್ಚವನ್ನು ಭರಿಸುತ್ತದೆ. ನಿಮ್ಮ ಬಳಿ ಇರುವ ವಿಮಾ ಪಾಲಿಸಿ ಅಥವಾ ಅದರ ಕವರೇಜ್ ಮೊತ್ತ ಕಡಿಮೆಯಾಯಿತು ಎಂದಾದರೆ ಈ ಆಯ್ಕೆಯನ್ನು ಮಾಡಿಕೊಳ್ಳಬಹುದು. ಇದು ಕಡಿಮೆ ಪ್ರೀಮಿಯಂ ಮತ್ತು ಅಧಿಕ ಕವರೇಜ್‌ನ್ನು ಒಳಗೊಂಡ ಆ್ಯಡ್-ಆನ್ ಪಾಲಿಸಿ.

3. **ಸೂಪರ್ ಟಾಪ್-ಅಪ್:** ಈ ಪ್ಲಾನ್‌ನಲ್ಲಿ ಪಾಲಿಸಿ ಅವಧಿಯಲ್ಲಿ ಕಡಿತಗೊಳಿಸಬಹುದಾದ ಮೊತ್ತವನ್ನು ಮೀರಿದ ಬಳಿಕ ಆಸ್ಪತ್ರೆಯ ಬಿಲ್ಲಿನ ಒಟ್ಟು ಮೊತ್ತವನ್ನು ಪಾವತಿ ಮಾಡಲಾಗುತ್ತದೆ. ಪಾಲಿಸಿಯಲ್ಲಿನ ಕಡಿತಗೊಳಿಸಬಹುದಾದ ಮೊತ್ತವನ್ನು ಪಾವತಿ ಮಾಡಿದ ಬಳಿಕ ಎಲ್ಲ ಪೂರಕ ಕ್ಲೈಮ್‌ಗಳಿಗೆ ಸೂಪರ್ ಟಾಪ್-ಅಪ್ ಪ್ಲಾನ್ ಅನ್ವಯವಾಗುತ್ತದೆ. ಟಾಪ್-ಅಪ್ ಪ್ಲಾನ್‌ನಲ್ಲಿ ಇರುವಂತೆ ಕಡಿತಗೊಳಿಸಬಹುದಾದ ಮಿತಿಯನ್ನು ಮೀರಿದ ಬಳಿಕ ಇಲ್ಲಿ ಯಾವುದೇ ಒಂದು ನಿರ್ದಿಷ್ಟ ಕ್ಲೈಮ್‌ಗೆ ಮಿತಿ ಇರುವುದಿಲ್ಲ. ಈ ಯೋಜನೆಯು ಸಂಚಿತ ಹಂತದಲ್ಲಿ ಕಾರ್ಯರೂಪಕ್ಕೆ ಬರುತ್ತದೆ. ಮೂಲ ಆರೋಗ್ಯ ಯೋಜನೆಯಲ್ಲಿ ಒಳಗೊಂಡಿರುವ ಸೌಲಭ್ಯದ ಕಡಿತಗೊಳಿಸುವ ಮಿತಿಯ ಮೊದಲ ಹಂತ ಮೀರಿದಾಗ ಕ್ಲೈಮ್ ಮಾಡಿಕೊಳ್ಳಬಹುದು. ನಿಮ್ಮ ಪಾಲಿಸಿ ವರ್ಷದ ಅವಧಿಯಲ್ಲಿ ಕ್ಲೈಮ್ ಮಾಡಿಕೊಳ್ಳುವ ಮೊತ್ತ ಕಡಿತಗೊಂಡ ನಂತರ ಸೂಪರ್ ಟಾಪ್-ಅಪ್ ಕವರೇಜ್ ಸಕ್ರಿಯವಾಗುತ್ತದೆ.




ಮೇಲಿನ ವಿವರಣೆಯ ಪ್ರಕಾರ ಅರ್ಥ ಮಾಡಿಕೊಂಡಂತೆ ನಿಮ್ಮ ಮೂಲ ಪಾಲಿಸಿಯ ಅವಧಿಯ ಜೊತೆಗೆ ಈ ಸೂಪರ್ ಟಾಪ್-ಅಪ್ ಪಾಲಿಸಿಯನ್ನು ಸೇರ್ಪಡೆ ಮಾಡಿಕೊಳ್ಳಬಹುದು. ಒಂದು ವೇಳೆ ನಿಮ್ಮ ಮೂಲ ಆರೋಗ್ಯ ವಿಮೆ ಪಾಲಿಸಿಯ ಅವಧಿ ಪ್ರತಿ ವರ್ಷ ಜನವರಿ 15ರಿಂದ ಜನವರಿ 14ರ ವರೆಗೆ ಇದ್ದರೆ ಕ್ಲೈಮ್ ಸಂಬಂಧಿ ಕಿರಿಕಿರಿಗಳು ಉಂಟಾಗುವುದನ್ನು ತಪ್ಪಿಸಲು ನಿಮ್ಮ ಟಾಪ್-ಅಪ್ ಪಾಲಿಸಿಯನ್ನು ಇದೇ ಅವಧಿಗೆ ಖರೀದಿ ಮಾಡಬೇಕು.

### ಒಂದು ಸಮರ್ಪಕ ಆರೋಗ್ಯ ವಿಮಾ ಪಾಲಿಸಿ ಹೇಗಿರುತ್ತದೆ?

ಒಂದು ಆರೋಗ್ಯ ವಿಮಾ ಪೋರ್ಟ್‌ಫೋಲಿಯೋ ವ್ಯಕ್ತಿಯ ವಯಸ್ಸು, ಅಗತ್ಯಗಳು ಮತ್ತು ಬಜೆಟ್ ಆಧಾರದಲ್ಲಿ ಬದಲಾವಣೆ ಹೊಂದುತ್ತ ಹೋಗುತ್ತದೆ. ಆರೋಗ್ಯ ವಿಮಾ ಸೌಲಭ್ಯಕ್ಕೆ ಅಗತ್ಯವಾದ ಮೊತ್ತವನ್ನು ನಿಗದಿ ಮಾಡುವಾಗ ವ್ಯಕ್ತಿಯ ವಯಸ್ಸು ಅತ್ಯಂತ ಪ್ರಮುಖ ಮಾನದಂಡ. ವ್ಯಕ್ತಿ ಯುವಕನಾಗಿದ್ದು ಉತ್ತಮ ಆರೋಗ್ಯವನ್ನು ಹೊಂದಿದ್ದರೆ ಉನ್ನತ ಆರೋಗ್ಯ ವಿಮಾ ಕವರೇಜ್ ಅತ್ಯಂತ ಕಡಿಮೆ ಇರುತ್ತದೆ. ಆದರೆ ವ್ಯಕ್ತಿಗೆ ವಯಸ್ಸಾಗುತ್ತ ಹೋದಂತೆ ಮತ್ತು ರೋಗಗಳಿಗೆ ಹೆಚ್ಚು ಒಳಗಾಗುತ್ತ ಹೋದಂತೆ ಕಾಯಿಲೆಗಳು ಜಾಸ್ತಿಯಾಗುತ್ತವೆ. ಹಾಗಾಗಿ ಪ್ರೀಮಿಯಂ ಮತ್ತು ಕ್ಲೈಮ್ ಎರಡೂ ಜಾಸ್ತಿ. ಹಾಗಾಗಿ ಟಾಪ್-ಅಪ್ ಅಥವಾ ಸೂಪರ್ ಟಾಪ್-ಅಪ್ ಆರೋಗ್ಯ ವಿಮಾ ಯೋಜನೆಯ ರೂಪದಲ್ಲಿ ಹೆಚ್ಚುವರಿ ಸೌಲಭ್ಯವನ್ನು ಪಡೆದುಕೊಳ್ಳುವುದು ಸೂಕ್ತ. ನೀವು ಯುವಕರಾಗಿದ್ದು ದೈಹಿಕವಾಗಿ ಗಟ್ಟಿಮುಟ್ಟಾಗಿದ್ದಾಗ ಸಮಗ್ರ ಆರೋಗ್ಯ ವಿಮಾ ಪಾಲಿಸಿಯನ್ನು ಹೊಂದುವುದು ಸೂಕ್ತ. ಇಲ್ಲದೇ ಹೋದರೆ ನಿಮಗೆ ವಯಸ್ಸಾದಾಗ ಮತ್ತು ನಿಮ್ಮ ಆರೋಗ್ಯ ಸ್ಥಿತಿ ಚೆನ್ನಾಗಿಲ್ಲದಾಗ ಆರೋಗ್ಯ ವಿಮಾ ಕಂಪನಿಗಳು ನಿಮಗೆ ಆರೋಗ್ಯ ವಿಮೆ ಪಾಲಿಸಿಯನ್ನು ಕೊಡದೇ ಹೋಗಬಹುದು.

ಒಂದು ಸೂಕ್ತ ಆರೋಗ್ಯ ವಿಮಾ ಕವರೇಜ್‌ನ್ನು ಪಡೆಯುವುದು ಹೇಗೆ ಎಂಬುದಕ್ಕೆ ಯಾವುದೇ ವೈಜ್ಞಾನಿಕ ಸೂತ್ರ ಇರುವುದಿಲ್ಲ. ಆದರೆ ಈ ಕೆಳಗಿನ ವಯಸ್ಸಿನ ಆಧಾರದ ಯೋಜನೆಗಳನ್ನು ವಿಭಾಗ ಮಾಡಬಹುದು.

1. 18ರಿಂದ 30 ವರ್ಷ ವಯಸ್ಸಿನವರಿಗೆ 5ಲಕ್ಷದ ಬೇಸ್ ಪಾಲಿಸಿ + 5 ಲಕ್ಷದ ಸೂಪರ್ ಟಾಪ್–ಅಪ್
2. 31–45 ವರ್ಷ ವಯಸ್ಸಿನವರಿಗೆ, 5 ಲಕ್ಷ ರೂ. ಬೇಸ್ ಪಾಲಿಸಿ + 10 ಲಕ್ಷದ ಸೂಪರ್ ಟಾಪ್–ಅಪ್.
3. 45 ವರ್ಷ ವಯಸ್ಸಿನವರಿಗಿಂತ ಮೇಲ್ಪಟ್ಟವರಿಗೆ– , 5 ಲಕ್ಷ ರೂ. ಬೇಸ್ ಪಾಲಿಸಿ + 25 ಲಕ್ಷದ ಸೂಪರ್ ಟಾಪ್–ಅಪ್. ಹಿರಿಯ ನಾಗರಿಕ ಪಾಲಿಸಿಯನ್ನು ವ್ಯಕ್ತಿಯು ಅದಕ್ಕೆ ಅರ್ಹತೆಯನ್ನು ಗಳಿಸಿದ ಬಳಿಕ ಪಡೆದುಕೊಳ್ಳಬಹುದು.

ಸಾಮಾನ್ಯವಾಗಿ 50 ರಿಂದ 60 ಲಕ್ಷ ರೂ. ಕವರೇಜ್ ಹೊಂದಿರುವ ಸಮಗ್ರ ಪೋರ್ಟ್‌ಫೋಲಿಯೋವನ್ನು ಆಯ್ಕೆ ಮಾಡಿದರೆ ಅದರಲ್ಲಿ ಓಪಿಡಿ, ನಿಯಮಿತದ ಆರೋಗ್ಯ ತಪಾಸಣೆ, ಹೆರಿಗೆಗೆ ಸಂಬಂಧಿಸಿದ ಸೌಲಭ್ಯ ಇತ್ಯಾದಿ ಆ್ಯಡ್–ಆನ್‌ಗಳು ಲಭ್ಯ. ಆದರೆ ನಿಮ್ಮ ಪೋರ್ಟ್‌ಫೋಲಿಯೋಗೆ ಇದನ್ನು ಸೇರಿಸಿಕೊಳ್ಳಬೇಕಾದರೆ ಭಾರೀ ಮೊತ್ತದ ಪ್ರೀಮಿಯಂ ಮೊರೆ ಹೋಗಬೇಕಾಗುತ್ತದೆ. ಹಾಗಾಗಿ ಬಿಗಿಯಾದ ಬಜೆಟ್ ನೀತಿಯನ್ನು ಹೊಂದಿರುವ ವ್ಯಕ್ತಿಯು ಕನಿಷ್ಠ 5ಲಕ್ಷ ರೂ.ಗಳ ಬೇಸ್ ಕವರ್ ಹೊಂದಿದ ಪಾಲಿಸಿಯನ್ನು ಕೈಗೆತ್ತಿಕೊಂಡು ಎನ್‌ಸಿಬಿ ಮತ್ತು ನವೀಕರಿಸುವ ಪ್ರಯೋಜನದಂತಹ ಕೆಲವು ಮಹತ್ವದ ಆ್ಯಡ್–ಆನ್‌ಗಳನ್ನು ಸೇರಿಸಿಕೊಳ್ಳಬಹುದು. ಇದು ನಿಮ್ಮ ಬೇಸಿಕ್ ಸೌಲಭ್ಯದ ಪ್ರೀಮಿಯಂನ್ನು ಹೆಚ್ಚಿಸಿದರೂ ಕೂಡ ಕಡಿಮೆ ವೆಚ್ಚದೊಂದಿಗೆ ನಿಮ್ಮ ಕವರೇಜ್‌ನ್ನು ಸುಧಾರಿಸಲು ಉತ್ತಮ ಅವಕಾಶ. ಇದಕ್ಕೆ ಯೋಜನೆ ರೂಪಿಸುವ ಸಂದರ್ಭದಲ್ಲಿ ಆರೋಗ್ಯ ವಿಮೆಯ ಪ್ರೀಮಿಯಂ ವಯಸ್ಸು ಮತ್ತು ವೈದ್ಯಕೀಯ ಹಣದುಬ್ಬರದ ಕಾರಣಕ್ಕೆ ಹೆಚ್ಚಾಗಬಹುದು. ಹಾಗಾಗಿ ನಿಮ್ಮ ಆರೋಗ್ಯ ವಿಮೆ ಪೋರ್ಟ್‌ಫೋಲಿಯೋ ಬಗ್ಗೆ ಯೋಜನೆ ರೂಪಿಸುವಾಗ ಅಗತ್ಯ ಅವಕಾಶಗಳನ್ನು ಮಾಡಿಕೊಳ್ಳಬೇಕು.

ಇದರ ಜೊತೆಗೆ ಯಾವ ನಗರಗಳಲ್ಲಿ ನೀವು ವಾಸಿಸುತ್ತಿದ್ದೀರಿ ಎನ್ನುವ ಇತರ ಅಂಶಗಳು ಕೂಡ ನಿಮ್ಮ ಪೋರ್ಟ್‌ಫೋಲಿಯೋ ಮೇಲೆ ಪರಿಣಾಮವನ್ನು ಬೀರುತ್ತದೆ. ಎರಡು ಮತ್ತು ಮೂರನೇ ಹಂತದ ನಗರಗಳಲ್ಲಿ ವ್ಯಕ್ತಿ/ಕುಟುಂಬಕ್ಕೆ ದೊರೆಯುವ ಕವರೇಜ್‌ಗೆ ಹೋಲಿಸಿದರೆ ಮೊದಲನೇ ಹಂತದ ನಗರಗಳಲ್ಲಿ ಕಡಿಮೆ ಇದೆ. ಒಂದನೇ ಹಂತದ ನಗರವು ಅಧಿಕ ವೈದ್ಯಕೀಯ ವೆಚ್ಚ ಹಾಗೂ ಜೀವನ ಶೈಲಿಯ ರೋಗಗಳನ್ನು ಹೊಂದಿರುತ್ತದೆ. ಕೆಲವು ನಿರ್ದಿಷ್ಟ ರೋಗಗಳಿಗೆ ಸಂಬಂಧಿಸಿ ಕೌಟುಂಬದ ಹಿನ್ನೆಲೆ ಇದ್ದರೆ ಅದರಿಂದ ರಕ್ಷಣೆ ಪಡೆದುಕೊಳ್ಳಬೇಕಾದ ಅಗತ್ಯವಿದೆ. ಅಂತಹ ಸಂದರ್ಭದಲ್ಲಿ ನಿಮ್ಮ ಪಾಲಿಸಿಯಲ್ಲಿ ಅಂತಹ ರೋಗ ಒಳಗೊಂಡಿದೆಯೇ ಎಂಬುದನ್ನು



ಗಮನಿಸಿ. ಒಂದು ವೇಳೆ ಮೊದಲೇ ಇದ್ದ ಕಾಯಿಲೆಯಾದರೆ ನೀವು ಕಾಯುವ ಅವಧಿ ಮತ್ತು ಪಾಲಿಸಿಯಲ್ಲಿ ಯಾವ ಪ್ರಮಾಣದ ಕವರೇಜ್ ಇದೆ ಎಂಬುದನ್ನು ನೋಡಿಕೊಳ್ಳಬೇಕು.

ಯಾವತ್ತು ನಿಮ್ಮ ಆರೋಗ್ಯ ವಿಮೆ ಪೋರ್ಟ್‌ಫೋಲಿಯೋ ಬಗ್ಗೆ ಯೋಜನೆ ಮಾಡುತ್ತೀರೋ ಆಗ ಈ ಎಲ್ಲ ಅಂಶಗಳನ್ನು ಗಮನದಲ್ಲಿ ಇಟ್ಟುಕೊಳ್ಳುವುದು ನಿರ್ಣಾಯಕ. ಇವೆಲ್ಲ ಸೂಕ್ಷ್ಮ ವಿಚಾರಗಳನ್ನು ಒಬ್ಬನೇ ವ್ಯಕ್ತಿ ಸಮಗ್ರವಾಗಿ ತಿಳಿದುಕೊಳ್ಳಲು ಸಾಧ್ಯವಿಲ್ಲ. ಹಾಗಾಗಿ ವಿಮೆ ಕ್ಷೇತ್ರದಲ್ಲಿ ತಜ್ಞರಾಗಿರುವವರ ಸಲಹೆಯನ್ನು ಪಡೆದುಕೊಳ್ಳುವುದು ಉತ್ತಮ.

ಸಾಮಾನ್ಯವಾಗಿ ವಿಮಾ ಕಂಪನಿಗಳು ಪ್ರತಿ 2–3 ವರ್ಷಗಳಿಗೊಮ್ಮೆ ಆರೋಗ್ಯ ವಿಮಾ ಪಾಲಿಸಿಗಳಲ್ಲಿ ಬದಲಾವಣೆಗಳನ್ನು ಮಾಡುತ್ತಾರೆ. ಹೊಸ ಹೊಸ ಅಂಶಗಳನ್ನು ಸೇರ್ಪಡೆ ಮಾಡುತ್ತಾರೆ. ಹೊಸ ತಂತ್ರಜ್ಞಾನಗಳು ಮತ್ತು ಕೌಶಲಗಳು ಬರುತ್ತಿದ್ದಂತೆ ಅದರ ಜೊತೆ ನಾವೂ ಕೂಡ ಅಪ್‌ಡೇಟ್ ಆಗುವುದು ಉತ್ತಮ. ಅದರ ಜೊತೆ ಜೊತೆಗೆ ನಮ್ಮ ಆರೋಗ್ಯ ವಿಮೆ ಪಾಲಿಸಿಗಳನ್ನು ಕೂಡ ಮೇಲ್ದರ್ಜೆಗೆ ಏರಿಸುವುದು ಉತ್ತಮ. ಅದೇ ಪ್ರೀಮಿಯಂ ಅಥವಾ ಕೆಲವು ನೂರು ರೂಪಾಯಿ ಹೆಚ್ಚಾಗಿದ್ದರೂ ಚಿಂತೆಯಿಲ್ಲ, ಹೆಚ್ಚು ಸಮಗ್ರವಾದ ಮತ್ತು ಅತ್ಯುತ್ತಮ ಅಂಶಗಳನ್ನು ಒಳಗೊಂಡ ಪಾಲಿಸಿಯನ್ನು ಹೊಂದುವ ಇರಾದೆ ನಿಮ್ಮದಾಗಲಿ. ಇತ್ತೀಚಿನ ದಿನಗಳಲ್ಲಿ ಅನೇಕ ರೀತಿಯ ಹೊಸ ರೋಗಗಳು ಮತ್ತು ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿರುವುದರಿಂದ ಆರೋಗ್ಯ ಸೇವೆಗಳ ವೆಚ್ಚ ಕೂಡ ಹೆಚ್ಚಿದೆ. ಈ ಎಲ್ಲ ಹಿನ್ನೆಲೆಯಲ್ಲಿ ಆರೋಗ್ಯ ವಿಮೆ ಎನ್ನುವುದು ಎಲ್ಲರ ಜೀವನದ ಅವಿಭಾಜ್ಯ ಅಂಗವಾಗಿದೆ. ■


**ಇನ್‌ಸ್ಪೈರ್ ಇಂಡಿಯಾ ವೆಲ್ತ್ ಪ್ರೈವೇಟ್ ಲಿ.**

(ARN–79020)

ಎಎಂಎಫ್‌ಐ ನೋಂದಾಯಿತ ಮ್ಯೂಚುಯಲ್ ಫಂಡ್ ವಿತರಕರು

ನಮ್ಮ ಸಂಪರ್ಕ: 9148319207, 080–42129917

Mail: info@inspireindiafs.com

**ನಮ್ಮ ಸೇವೆಗಳು**

1. ಮ್ಯೂಚುಯಲ್ ಫಂಡ್ಸ್
2. ಸ್ಟಾಕ್ ಬ್ರೋಕಿಂಗ್
3. ಫೈನಾನ್ಷಿಯಲ್ ಕನ್ಸಲ್ಟಿಂಗ್ & ಪ್ಲಾನಿಂಗ್
4. ಪ್ರಾಪರ್ಟಿ ಇನ್ವೆಸ್ಟ್‌ಮೆಂಟ್
5. ತೆರಿಗೆ ಉಳಿತಾಯ ಬಾಂಡ್‌ಗಳು
6. ವಿಮೆ
7. ವೆಲ್ತ್ ಮ್ಯಾನೇಜ್‌ಮೆಂಟ್
8. ಹಣಕಾಸು ಮೌಲ್ಯಮಾಪನ
9. ತೆರಿಗೆ ಸಲ್ಲಿಕೆ
10. ವಿಲ್ ಬರವಣಿಗೆ

ವಿಳಾಸ : INSPIRE INDIA WEALTH PVT LTD

@ 65, 'Surasa Enclave', 1st Floor, Puttanna Road, Gandhi Bazar, Basavanagudi, Bengaluru-560004



ಈ ವಾರ್ತಾಪತ್ರದ ಸಂಕಲನ ಮಾಡುವ ಸಂದರ್ಭದಲ್ಲಿ ನಾವು ಎಲ್ಲ ರೀತಿಯ ಕಾಳಜಿ ಮತ್ತು ಎಚ್ಚರಿಕೆಯನ್ನು ವಹಿಸಿರುತ್ತೇವೆ. ಇಲ್ಲಿನ ಮಾಹಿತಿಗಳನ್ನು ಹಲವು ನಂಬಿಕೆಗೆ ಅರ್ಹವಾದ ಮೂಲಗಳಿಂದ ಪಡೆದಿರುತ್ತೇವೆ. ಆದರೆ, ಯಾವುದೇ ಮಾಹಿತಿಯ ಖಚಿತತೆ, ಅರ್ಹತೆ ಅಥವಾ ಪರಿಪೂರ್ಣತೆಯ ಬಗ್ಗೆ ಖಾತರಿಯನ್ನು ನೀಡುವುದಿಲ್ಲ. ಹಾಗಾಗಿ ಇಂತಹ ಮಾಹಿತಿ ಬಳಕೆಯಿಂದ ಆಗಬಹುದಾದ ಯಾವುದೇ ದೋಷ ಅಥವಾ ಲೋಪಗಳಿಗೆ ಜವಾಬ್ದಾರರಾಗಿರುವುದಿಲ್ಲ. ಈ ವಾರ್ತಾಪತ್ರದಲ್ಲಿ ತಿಳಿಸಲಾದ, ಚರ್ಚಿಸಲಾದ ಅಥವಾ ಶಿಫಾರಸ್ಸು ಮಾಡಲಾದ ಯಾವುದೇ ಯೋಜನೆಗಳಿಗೆ ಸಂಬಂಧಿಸಿದಂತೆ ಹೂಡಿಕೆಯನ್ನು ಮಾಡುವ ಸಮರ್ಪಕತೆಯ ಬಗ್ಗೆ ಹೂಡಿಕೆದಾರರು ಸೂಕ್ತವಾದ ಹಣಕಾಸು ಸಲಹೆಗಳನ್ನು ಪಡೆಯಬೇಕು ಮತ್ತು ಭವಿಷ್ಯದ ನಿರೀಕ್ಷೆಗಳ ಬಗ್ಗೆ ನೀಡಿರುವ ಹೇಳಿಕೆಗಳು ಕಾರ್ಯರೂಪಕ್ಕೆ ಬರಬಹುದು ಅಥವಾ ಬಾರದೇ ಇರಬಹುದು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಮ್ಯೂಚುಯಲ್ ಫಂಡ್ ಹೂಡಿಕೆಗಳು ಯಾವತ್ತೂ ಮಾರುಕಟ್ಟೆಗೆ ಸಂಬಂಧಿಸಿದ ಅಪಾಯದ ವ್ಯಾಪ್ತಿಗೆ ಒಳಪಟ್ಟಿರುತ್ತವೆ. ಹಾಗಾಗಿ ಹೂಡಿಕೆಯನ್ನು ಮಾಡುವುದಕ್ಕೂ ಮುನ್ನ ನಿಮಗೆ ನೀಡಲಾದ ದಾಖಲೆಗಳನ್ನು ದಯವಿಟ್ಟು ಅತ್ಯಂತ ಎಚ್ಚರಿಕೆಯಿಂದ ಓದಿಕೊಳ್ಳಿ. ಹಿಂದಿನ ನಿರ್ವಹಣೆಯ ಕೇವಲ ಸೂಚಕ ಉದ್ದೇಶವನ್ನು ಹೊಂದಿದ್ದು ಅದು ಯಾವುದೇ ಕಾರಣಕ್ಕೂ ಭವಿಷ್ಯದ ಮಾರ್ಗದರ್ಶಕವಾಗಿರುವುದಿಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.